ಇರುತ್ತಿದ್ದರು. ತಳ್ಳುಗಾಡಿಯ ಮೇಲೆ ಒಬ್ಬಾತ ಬಿಸಿಬಿಸಿ ಪಕೋಡಾ ಕರಿದು ಕೊಡುತ್ತಿದ್ದ. ಚೆನ್ನಾಗಿ ಮಾಡತಿರಬಹುದಾ? ಅಂತ ಕುತೂಹಲ ತೋರಿಸುತ್ತ ಅತ್ತ ಹೋದ ಜಯರಾಮಯ್ಯ ಎರಡು ಪ್ಲೇಟು ಪಕೋಡ ಖರೀದಿಸಿದರು. ಬೆಳಗ್ಗೆಬೆಳಗ್ಗೆ ಕರಿದ ತಿಂಡಿ ಸರಿಯೇನ್ರೀ ಅಂತ ಅರೆಮನಸಿನ ಆಕ್ಷೇಪ ವ್ಯಕ್ತಪಡಿಸುತ್ತ ದೀನಪ್ರಸಾದ್ ಪಕೋಡಾ ಬಾಯಿಯತ್ತ ಒಯ್ದರು. ಒಳ್ಳೇ ರುಚಿಯಾಗಿತ್ತು. ಇಬ್ಬರೂ ಸವಿಯತೊಡಗಿದರು. 'ನಿಮ್ಮ ಪೂಡ್ಲ್ ಏನು ತಿನ್ನುತ್ತೆ? ಈ ಜಾತಿ ನಾಯಿಗಳಿಗೆ ಪಕೋಡಾ ಎಲ್ಲ ಸೇರಲ್ವ?' ಸುರುಮಾಡಿದರು ದೀನಪ್ರಸಾದ್.

'ಏ... ಅಂತಾದ್ದೆಲ್ಲ ಹಾಕಬಾರದು. ಅವೇನು ಕಂತ್ರೀ ನಾಯಿಗಳ?' ನಕ್ಕವರು, 'ನಾಯಿ ಬಗ್ಗೆ ನನ್ನ ತಂಗೀ ಮಗಳು ಶ್ಯಾಮಲಿ ಕೇಳಬೇಕು. ಇದೂ ಅವಳದೆ.'

'ಮತ್ತೆ ನಿಮ್ಮ ಜೊತೆ ಯಾಕೆ ಬರುತ್ತೆ... ಜೊತೇಲೆ ಇರತಾಳಾ ತಂಗಿ ಮಗಳೂ?'

'ನಮ್ಮನೆ ಪಕ್ಕದಲ್ಲೆ ತಂಗಿ ಮನೆಯೂ ಇರೋದು. ಅವಳ ಮಗಳೂ ಕಾಲೇಜು ಪ್ರಾಧ್ಯಾಪಕಿ. ನಿಮ್ಮ ಹಿಸ್ಟರಿ ವಿಷಯದಲ್ಲೇ ಅವಳದ್ದೂ ಡಾಕ್ಟರೇಟು' ದೀನಪ್ರಸಾದರ ಕುತೂಹಲ ಕೆರಳಿತು.

'ಯಾವಾಗ ಡಾಕ್ಟರೇಟು ಸಿಕ್ಕಿದ್ದು?'

'ಆಗಿರಬಹುದು ಹತ್ತು ವರ್ಷ. ಮೊದಲೆ ಸಿಗಬೇಕಿತ್ತು; ಸತಾಯಿಸಿಬಿಟ್ಟ ಮುಂಡೇಮಗ ಗೈಡು. ಅಲ್ಲೂ ಇಂತದೆಲ್ಲ ನಡೆಯುತ್ತೆ ನೋಡಿ... ದೊಡ್ಡದೊಡ್ಡ ಬಂಗಲೆಗಳನ್ನೆ ಕಟ್ಟತಾರೆ ಅಂದ್ರೆ ಮತ್ತೆ ಹ್ಯಾಗೆ ಅಂತೀರ...' ಅರಿವು ಮೂಡಿ ತಟ್ಟನೆ ಅಲ್ಲಿಗೆ ನಿಲ್ಲಿಸಿದರು.

ರಾತ್ರಿ ಊಟಕ್ಕೆ ಮೊದಲು ಒಂದು ಲಾರ್ಜ್ ಶಿವಾಸ್‌ರೀಗಲ್ ಹಾಕೋದು ರೂಢಿಸಿಕೊಂಡಿದ್ದರು. ಆವತ್ತು ಎರಡನೇದು ಎರಸಿಕೊಂಡರು. ತನ್ನದೂ ದೊಡ್ಡ ಸೈಟು; ದೊಡ್ಡ ಬಂಗಲೇನೆ. ಮಧ್ಯವಯಸ್ಸು ದಾಟಿದಮೇಲೇ ಈ ಆಸೆಗಳು ಕೆರಳೋದು ಜಾಸ್ತಿಯೆ? ಮಕ್ಕಳ ಉಚ್ಚ ಶಿಕ್ಷಣ, ಅವರ ಮದುವೆ ಎಲ್ಲ ಆಗಲೆ ಮೇಲೆ ಬೀಳೋದು. ಮೇಲಿಂದ ಸ್ವಂತ ಮನೆಯಾಗಿಲ್ಲ, ತಾನಿನ್ನೂ ಸೆಟ್ಲ್ ಆಗಿಲ್ಲ ಅನ್ನುವ ತಳಮಳ ಕಾಡುವುದೂ ಆಗಲೆ. ಪ್ರಮೋಷನ್ನಿಗೆ ಅನಿವಾರ್ಯ ಅಂತ ಬರೋ ಹಲವರಿಗೆ ಆಸಕ್ತಿಯೂ ಇರಲ್ಲ, ಬುದ್ಧಿಶಕ್ತಿಯೂ ಇರಲ್ಲ. ಆದರೆ, ದುಡ್ಡಿರುತ್ತೆ. ತಮ್ಮ ಸೇವಾವಧಿಯಲ್ಲಿ ಬಂದ ದುಡ್ಡಿಲ್ಲದ ತೀಕ್ಷ್ಣಬುದ್ಧಿಯವರ ನೆನಪಾಗಿ ಮೆಚ್ಚುಗೆ ಮೂಡಿತು. ಅಂಥವರಿಂದ ಯಾರ್‍ಯಾರಿಗೆ ಥೀಸಿಸ್ ಬರೆಸಿದೆ ಅಂತ ನೆನಪು ಮಾಡಿಕೊಳ್ಳಲು ಶಿವಾಸ್‌ರೀಗಲ್ ಪ್ರಚೋದಿಸಿತು. ನಮಗೆ ಬೇಕಾದವರಪಾ, ಏನಾದ್ರು ಮಾಡಿ ಅಂತ ಪ್ರಭಾವಶಾಲಿಗಳ ಒತ್ತಡ ಬೇರೆ. ತಾನು ಮಾಡಿದ್ದೇನು ತಪ್ಪು? ಹೀಗೆ ತನಗೆ ಬಂದದ್ದು ಇಪ್ಪತ್ತೈದಿರಬಹುದಾ ಅಲ್ಲ ಮೂವತ್ತೇನೋ... ತಮ್ಮ ಬಂಗಲೆಯ ಒಳಗೆಲ್ಲ ಕಣ್ಣು ಹಾಯಿಸಿದರು. ಜಯರಾಮಯ್ಯನಿಗೆ ತನ್ನ ಬಗ್ಗೆ ಏನೋ ಗೊತ್ತಿರಬಹುದಾ? ಇಲ್ಲ, ಹಾಗೇ ಅಲವತ್ತುಕೊಂಡಿರ್ತಾನೆ ಅನಿಸಿತು. ಅದು ಸರಿ, ಆದರೆ ಆ ಮತ್ತೊಂದು ಸೆಳೆತ, ಅದೂ ಯಾಕೆ ಮಧ್ಯವಯಸ್ಸಿನ ಅನಂತರವೆ ಭುಸುಗುಡುವುದು? ಅದರ ಸಮರ್ಥನೆಗೆ ಕಾರಣ ಹುಡುಕಲು ತಡಕಾಡಿದರು. ಗ್ಲಾಸಿಗೆ ಮತ್ತೊಂದು ಎರಸಲು ನೋಡುತ್ತಿದ್ದಾಗ ಅಲ್ಲೇನೋ ಮಾಡುತ್ತಿದ್ದ ತಾಪಸಿ 'ಊಹುಂ...' ಅಂತ ಸ್ವರ ಹೊರಡಿಸಿ ಸಾಕು ಅನ್ನುವಂತೆ ಖಡಕ್ಕಾಗಿ ಸನ್ನೆ ಮಾಡಿದರು. ಬಾಟಲಿಯನ್ನು ಮುಚ್ಚಿ ಗ್ಲಾಸನ್ನು ಸರಿಸಿಟ್ಟು ಅಡುಗೆಕೋಣೆಯತ್ತ ನೋಡಿದರು. ನಿಂತವಳು ಅರೆಬಗ್ಗಿ ಫ್ರಿಜ್ಜಿನಿಂದ ಏನನ್ನೊ ತೆಗೆಯುತ್ತಿದ್ದಳು. ಮುಂಚಾಚಿದ ಬಿಳಿಯ ಮಾಂಸಲ ತೋಳು, ಎಡೆಯಲ್ಲಿ ದಪ್ಪನೆಯ ಎರಡು ಕೆಳಮುಖವಾಗಿ ಕುಲುಕಾಡಿದವು. ಮೈ ಬಿಸಿಯೇರಿತು. ಅನುನಯಿಸಿ ಇವತ್ತು ಒಪ್ಪಿಸಬೇಕು ಅನ್ನುವ ಒತ್ತಡ ಮೂಡಿತು. ಈಗ ಅದೇನು ಬೇಡ... ತೆಪ್ಪಗೆ ಮಲಗಿ... ಆಯ್ತಾ? ಅಂತ ಗದರಿಸುತ್ತಾಳೆ. ಒಂದುವೇಳೆ ಒಪ್ಪಿ ತಾನೇ ನಡುವೆ ಸೊರಗಿ... ಹಿಂದೆ ಹೀಗಾಗಲು ಸುರುವಾದ ಅನಂತರವೆ ಅವಳು ಪೂರ್ತಿ ವಿಮುಖಳಾದದ್ದು ಅಂತ ನೆನಪಾಯಿತು. ಅವಳಿಗು ವಯಸ್ಸಾಯ್ತಲ್ಲ ಅಂತೆಣಿಸುವಾಗ ಚಿತ್ತದಲ್ಲಿ